■ ವಿಶಾಖ ಎನ್.

# ತುಂಟಿ ಬುಜ್ಜಿಗೆ ಕೀರ್ತಿ ಕಂಠ

ಈ ಕಾರು ಮಾತನಾಡುತ್ತದೆ; ಅದೂ ಸ್ತ್ರೀ ಕಂಠದಲ್ಲಿ. ಆ ಕಂಠ ಯಾರದ್ದು ಎನ್ನುವುದು ಇನ್ನೊಂದು ವಿಶೇಷ. ನಟಿ ಕೀರ್ತಿ ಸುರೇಶ್ ಈ ಕಾರಿನ ರೂಪದಲ್ಲಿ ಮಾತನಾಡಿದ್ದಾರೆ. ಕಾರು ಬೆರಗು, ಕಂಠ ಸುಶ್ರಾವ್ಯ. ಪ್ರಿಯತಮೆಯು ನಲ್ಲನ ಇಶಾರೆಗಳಿಗೆ ನಖರಾಗಳನ್ನು ಮಾಡುತ್ತಲೇ ಸ್ಪಂದಿಸುವ ಪ್ರೇಮಪಲ್ಲವಿಯೊಂದನ್ನು ನಾವೆಲ್ಲ ನೋಡಿರುತ್ತೇವಲ್ಲ; ಇಲ್ಲಿಯೂ ಹಾಗೆಯೇ ಆಗುತ್ತದೆ.

ಭೈರವನ ಪಾತ್ರಧಾರಿ ಪ್ರಭಾಸ್. ಅವರ ಐಷಾರಾಮಿತನಕ್ಕೂ ಮಿಗಿಲಾದ ವಿಲಕ್ಷಣವೂ, ಆಕರ್ಷಕವೂ ಆದ ಕಾರು ಬುಜ್ಜಿ. ಅದರೊಟ್ಟಿಗೆ ಪ್ರಭಾಸ್ ಪಾತ್ರ ಮಾತನಾಡುತ್ತದೆ. 'ಇವತ್ತು ಒಂದು ದಿನವಾದರೂ ನೆಗೆಟಿವ್ ಆಗಿ ಮಾತನಾಡಬೇಡ' ಎನ್ನುತ್ತಾನೆ ಭೈರವ. ಬುಜ್ಜಿ ಸುಲಭವಾಗಿ ಕರಗುವವರ ಪೈಕಿ ಅಲ್ಲ. ನಖರಾ ಮಾಡುತ್ತಲೇ ತನ್ನ ಒಡೆಯನ ಮಾತನ್ನು ಆಮೇಲೆ ಕೇಳುತ್ತದೆ. 'ಲವ್ ಯೂ ಬುಜ್ಜಿ' ಎಂದು ಭೈರವ ಆನಂದತುಂದಿಲನಾಗಿ ಹೇಳುತ್ತಾನೆ. ನಡುವೆ ಏನೆಲ್ಲ ನಡೆಯುತ್ತದೆ ಎನ್ನುವುದು ಸಸ್ಪೆನ್ಸ್.

'ಕಲ್ಕಿ 2898 ಎಡಿ' ಸಿನಿಮಾದ ಪುಟ್ಟ ಟ್ರೈಲರ್ ಮೂಲಕ ಬುಜ್ಜಿ ಹಾಗೂ ಭೈರವನ ನಡುವಿನ ಸಂಬಂಧದ ಝಲಕ್ ಒಂದು ಅನಾವರಣಗೊಂಡಿದೆ. ಆಟೊಮೊಬೈಲ್‌ಮೋಹಿ ಯುವಕರ ಚರ್ಚೆಗೆ ಇದಕ್ಕಿಂತ ಈ ಕಾಲದಲ್ಲಿ ಬೇರೇನು ವಸ್ತು ಬೇಕು?

ಅಮಿತಾಭ್ ಬಚ್ಚನ್ ಪಾತ್ರವೊಂದರ ಪರಿಚಯದ ಮೂಲಕ ಬಿಟ್ಟಿದ್ದ ಸಣ್ಣ ಝಲಕ್‌ನ ವಿಡಿಯೊ ಕೂಡ ಹೀಗೇ ಚರ್ಚೆಗೆ ಗ್ರಾಸವಾಗಿತ್ತು. ಇದೀಗ ಬುಜ್ಜಿ–ಭೈರವರ ಪಾಳಿ.

ಬುಜ್ಜಿಯನ್ನು ಕಾರು ಎಂದು ಸರಳೀಕರಿಸುವುದೂ ಕಷ್ಟ. ಯಾಕೆಂದರೆ, ಅದು ರೋಬೊ ಎನ್ನುವುದು ಕ್ರಮೇಣ ವಿಡಿಯೊದಲ್ಲಿ ಸ್ಪಷ್ಟವಾಗುತ್ತದೆ.

ಮಾತನಾಡುವ ವಾಹನಗಳ ಸಿನಿಮಾಗಳು ಗೆದ್ದಿರುವ ಉದಾಹರಣೆಗಳು ಚಿತ್ರರಂಗದಲ್ಲಿ ಇವೆ. ಫ್ಯಾಂಟಸಿಗೆ ಅಂಕ ಸಿಗುವುದರಲ್ಲಿ ಅನುಮಾನವೇ ಇಲ್ಲವೆನ್ನುವುದಕ್ಕೆ ಇದೇ ಸಾಕ್ಷಿ. ನಾಗ್ ಅಶ್ವಿನ್ ಅಂತಹುದೇ ಮಾದರಿಯನ್ನು ತಮ್ಮ ಚಿತ್ರದಲ್ಲಿಯೂ ಅಳವಡಿಸಿಕೊಂಡಿದ್ದಾರೆ.

ಪ್ರಭಾಸ್, ದೀಪಿಕಾ ಪಡುಕೋಣೆ, ಅಮಿತಾಭ್ ಬಚ್ಚನ್, ಕಮಲ ಹಾಸನ್, ದಿಶಾ ಪಟಾನಿ ಹಾಗೂ ಈ ಬುಜ್ಜಿ ತಾರಾಗಣದಲ್ಲಿ ಇರುವ 'ಕಲ್ಕಿ...'ಗೆ ವೈಜಯಂತಿ ಮೂವೀಸ್ ಬಂಡವಾಳ ಹೂಡಿದೆ.

ಮಹೀಂದ್ರ ಕಂಪನಿಯ ಆನಂದ್ ಮಹೀಂದ್ರಾ ಅವರನ್ನು ಇಂತಹ ವಾಹನ ತಯಾರಿಸಿ ಕೊಡುವಂತೆ ವರ್ಷಗಳ ಹಿಂದೆಯೇ ನಾಗ್ ಕೇಳಿಕೊಂಡಿದ್ದರು. ದೇಸಿ ಎಂಜಿನಿಯರ್‌ಗಳ ತಂಡವೊಂದು ಈಗ ಹೊಸ ವಾಹನವನ್ನು ಪ್ರೇಕ್ಷಕರ ಮುಂದಿರಿಸಿದೆ. ಅದರ ಕರಾಮತ್ತುಗಳನ್ನು ತೆರೆಮೇಲೆ ನೋಡಲು ಕುತೂಹಲ ತುಂಬಿಕೊಂಡ ಕಣ್ಣುಗಳು ಈಗಲೇ ಅರಳತೊಡಗಿವೆ. ■





# ಫಹಾದ್ ಮುಖಾಮುಖಿ ಸಾಕಾರ

ಫಹಾದ್ ಫಾಸಿಲ್, ಸಂದರ್ಶನಗಳೆಂದರೆ ಮಾರು ದೂರ ನಿಲ್ಲುತ್ತಿದ್ದವರು. ಇತ್ತೀಚೆಗೆ ಅವರು ಪ್ರಮುಖ ಮಾಧ್ಯಮಗಳ ಜೊತೆ ಮುಖಾಮುಖಿಯಾದರು.

ಅವರಿಗೆ ತಮ್ಮನ್ನು ತಾವು ಒಂದಿಷ್ಟು ಅನಾವರಣಗೊಳಿಸಿಕೊಳ್ಳುವ ಉಮೇದು ಇದ್ದಿರಬೇಕು. ಯಾಕೆಂದರೆ, ಇದುವರೆಗೆ ಅವರ ಕುರಿತ ಬಹುತೇಕ ಸುದ್ದಿಗಳಲ್ಲಿ ಗಾಸಿಪ್ ಹೆಚ್ಚು ಇರುತ್ತಿತ್ತು.

ಫಹಾದ್ ನಿರ್ಭಿಡೆಯ ಮನುಷ್ಯ. 'ಪುಷ್ಪಾ ತೆಲುಗು ಸಿನಿಮಾ ಪಾತ್ರದಿಂದ ನನಗೇನೂ ಅನುಕೂಲವಾಗಿಲ್ಲ' ಎಂದು ಹೇಳಿ, ಅದು ನಿರ್ದೇಶಕರಿಗೂ ಗೊತ್ತಿದೆ ಎಂಬ ಕೊಸರನ್ನೂ ಹಾಕಿದವರು. ಇತ್ತೀಚೆಗೆ ತೆರೆಕಂಡು, ಅದಾಗಲೇ ಒಟಿಟಿಗೂ ಬಂದಿರುವ 'ಆವೇಶಂ' ಮಲೆಯಾಳಂ ಸಿನಿಮಾ ಕನ್ನಡದವರಿಗೂ ಮುಖ್ಯ. ಆ ಸಿನಿಮಾದಲ್ಲಿ ಫಹಾದ್ ಸಾಕಷ್ಟು ಕನ್ನಡ ಸಂಭಾಷಣೆಗಳನ್ನು ಮಾತನಾಡಿದ್ದಾರೆ; ಅದೂ ಮಲೆಯಾಳಿ ಶೈಲಿಯಲ್ಲಿ. ಆ ಸಿನಿಮಾದ ಕಥೆ ನಡೆಯುವುದು ಬೆಂಗಳೂರಿನಲ್ಲಿ.

ಜೀತು ಜೋಸೆಫ್ ನಿರ್ದೇಶನದ ಈ ಸಿನಿಮಾದಲ್ಲಿ ವಿಲಕ್ಷಣ ಎನ್ನಬಹುದಾದ ಚಿತ್ರಕಥಾ ಮಾದರಿಯೊಂದು ಇದೆ. ಕಥೆಯನ್ನು ತನ್ನಷ್ಟಕ್ಕೇ ಬೆಳೆಯಲು ಬಿಟ್ಟಂತೆ ಮಾಡಿ, ಅಂತ್ಯವನ್ನೂ ಲಂಬಿಸುವ ಕ್ರಮ. ದಕ್ಷಿಣ ಭಾರತದ ತೆಲುಗು ಸಿನಿಮಾಗಳಲ್ಲಿ ಇರುವ ಮಸಾಲೆಯನ್ನು ಇದರಲ್ಲಿ ಹದವರಿತಂತೆ ಅರೆಯಲಾಗಿದೆ. ವ್ಯಂಗ್ಯೋಕ್ತಿಗಳಿಗೂ ಕೊರತೆ ಇಲ್ಲ.

ಆ ಸಿನಿಮಾದಲ್ಲಿ ತಾವು ಮಾಡಿರುವ ರಂಗ ಎಂಬ ಪಾತ್ರ ಬೆಂಗಳೂರಿನಲ್ಲಿ ಇತ್ತು ಎಂದೂ ಫಹಾದ್ ಹೇಳಿದರು. ತಮ್ಮ ಸಿನಿಮಾವನ್ನು ತಾವು, ಬಿಡುಗಡೆಯಾದ ಎಷ್ಟೋ ದಿನಗಳ ನಂತರ ನೋಡುವ ಸತ್ಯವನ್ನೂ ಅವರು ಹಂಚಿಕೊಂಡರು. ■